**ಕರ್ನಾಟಕ ಸರ್ಕಾರ**

ಸಂಖ್ಯೆ: ಅಪಜೀ 100 ಎಫ್‌ಎಪಿ 2023

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 8.9.2023

**ಜಂಟಿ ಸುತ್ತೋಲೆ**

ವಿಷಯ:- ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2023-24ನೇ ಸಾಲಿನ ಆಯವ್ಯಯದಲ್ಲಿ ಘೋಷಿತ "**ಸಸ್ಯ ಶ್ಯಾಮಲ**" ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಕುರಿತಾದ ಮಾರ್ಗಸೂಚಿಗಳು.

ಉಲ್ಲೇಖ:-
1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 2023-24 ನೇ ಸಾಲಿನ "ಸಸ್ಯ ಶ್ಯಾಮಲ" ಕಾರ್ಯಕ್ರಮ ಅನುಷ್ಠಾನದ ಕುರಿತು ದಿನಾಂಕ:11.08.2023 ರಂದು ನಡೆದ ಸಭಾ ನಡಾವಳಿಗಳು.
2. ದಿನಾಂಕ:19.08.2023ರಂದು "ಸಸ್ಯ ಶ್ಯಾಮಲ" ಕಾರ್ಯಕ್ರಮ ಅನುಷ್ಠಾನ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಜಂಟಿ ವಿಡಿಯೋ ಸಂವಾದ ಸಭೆಯಲ್ಲಿ ನೀಡಿದ ಸೂಚನೆಗಳಂತೆ.

***********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನ ಆಯವ್ಯಯ ಪುಸ್ತಕದ ಕಂಡಿಕೆ '95' ರಲ್ಲಿ ಶಿಕ್ಷಣ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ಸ್ಥಳಾವಕಾಶವುಳ್ಳ ಶಾಲೆಗಳ ಸುತ್ತಮುತ್ತ ಒಂದು ವರ್ಷದ ಕಾಲಾವಧಿಯಲ್ಲಿ 50 ಲಕ್ಷ ಸಸಿಗಳನ್ನು ನೆಡುವ ವಿನೂತನ "ಸಸ್ಯ ಶ್ಯಾಮಲ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು" ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿರುತ್ತಾರೆ.

ಈ ಸಂಬಂಧ ದಿನಾಂಕ:19.08.2023ರಂದು "ಸಸ್ಯ ಶ್ಯಾಮಲ" ಕಾರ್ಯಕ್ರಮ ಅನುಷ್ಠಾನ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರುಗಳ ಜಂಟಿ ಅಧ್ಯಕ್ಷತೆಯಲ್ಲಿ ನಡೆದ

ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಿದಂತೆ ಸದರಿ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮುಖ್ಯಸ್ಥರುಗಳಿಗೆ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

1. "ಸಸ್ಯ ಶ್ಯಾಮಲ" ಕಾರ್ಯಕ್ರಮ ಅನುಷ್ಠಾನಕ್ಕಾಗಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ವತಿಯಿಂದ ಪರಿಸರಕ್ಕೆ ಉಪಯುಕ್ತವಾಗುವಂತ ಸಸಿಗಳನ್ನು ಉಚಿತವಾಗಿ ಒದಗಿಸಲಾಗುವುದು.
2. ಅರಣ್ಯ ಇಲಾಖೆಯ ವಿಭಾಗದ ಕಛೇರಿಗಳಿಂದ ಒದಗಿಸಲಾಗುವ ವಿವಿಧ ಬಗೆಯ ಸಸಿಗಳನ್ನು, ಆಯಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಸುತ್ತಮುತ್ತ ಇರುವ ಸ್ಥಳಗಳಲ್ಲಿ ಹಾಗೂ ಸದರಿ ಶಾಲಾ ಕಾಲೇಜುಗಳಿಗೆ ಸೇರಿದ ಜಾಗಗಳಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಶ್ರಮದಾನದ ಮೂಲಕ ನೆಟ್ಟು, ಪೋಷಿಸಿ ಆರೈಕೆ ಮಾಡಲು ಸೂಕ್ತ ಕ್ರಮಗಳನ್ನು ವಹಿಸತಕ್ಕದ್ದು.
3. ಸರ್ಕಾರಿ ಶಾಲಾ /ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಸದರಿ ಸಸಿಗಳನ್ನು ನೆಡುವ ಮತ್ತು ಪೋಷಿಸುವ ಕಾರ್ಯನಿರ್ವಹಿಸಬೇಕಿದೆ ಹಾಗೂ ಇವರ ಜೊತೆ ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು/ಸ್ಥಳೀಯ ಸಂಸ್ಥೆ ಜನಪ್ರತಿನಿಧಿಗಳು ಸ್ಥಳೀಯ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯತಿಯ ಗ್ರಾಮ ಅರಣ್ಯ ಸಮಿತಿ ಸಹಕಾರ ಪಡೆಯುವುದು.
4. ಶಾಲೆಗಳಲ್ಲಿ ಸಸಿ ನೆಡುವ ಈ ಕಾರ್ಯಕ್ರಮದಡಿ ಜಿಲ್ಲಾ ಹಂತದಲ್ಲಿ ಶಿಕ್ಷಣ ಇಲಾಖಾ ವತಿಯಿಂದ ಉಪನಿರ್ದೇಶಕರು (ಆಡಳಿತ) ರವರು ಸದರಿ ಕಾರ್ಯಕ್ರಮದ ಉಸ್ತುವಾರಿ ವಹಿಸುವುದು. ಅರಣ್ಯ ಇಲಾಖೆ ವತಿಯಿಂದ ಜಿಲ್ಲಾ ಹಂತದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇವರು ಸದರಿ ಕಾರ್ಯಕ್ರಮದ ಉಸ್ತುವಾರಿ ವಹಿಸುವುದು. ತಾಲ್ಲೂಕು ಹಂತದಲ್ಲಿ ಶಿಕ್ಷಣ ಇಲಾಖಾ ವತಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಓ)ಗಳು ನೋಡಲ್ ಅಧಿಕಾರಿಗಳಾಗಿ ಮತ್ತು ಅರಣ್ಯ ಇಲಾಖೆಯ ವತಿಯಿಂದ ಸಾಮಾಜಿಕ ಅರಣ್ಯ ವಿಭಾಗಗಳ ತಾಲ್ಲೂಕು ಮಟ್ಟದ ವಲಯ ಅರಣ್ಯಾಧಿಕಾರಿಗಳು ಕಾರ್ಯಕ್ರಮದ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
5. ಅರಣ್ಯ ಇಲಾಖೆಯ ಸಲಹೆಯಂತೆ ಸಸಿಗಳನ್ನು ನೆಡಲು ಎರಡು ಸಸಿಗಳ ನಡುವೆ ಕನಿಷ್ಠ 5 ಮೀಟರ್ ಗಳಷ್ಟು ಅಂತರ ಇರಬೇಕೆಂದು ತಿಳಿಸಲಾಗಿದೆ. ಅಲ್ಲದೇ ಸಸಿಯನ್ನು ನೆಡುವ ಪೂರ್ವದಲ್ಲಿ, ಅದು ನಂತರ ಮುಂದಿನ ದಿನಗಳಲ್ಲಿ ಮರವಾಗಿ ಬೆಳೆದಾಗ ಯಾವುದೇ ಕಟ್ಟಡ / ಆವರಣ ಗೋಡೆಗೆ ಹಾನಿ ಮಾಡದೇ ಇರದ ಹಾಗೆ ಸದರಿ ಕಟ್ಟಡ ಮತ್ತು ಆವರಣ ಗೋಡೆಯ ನಡುವೆ 5 ಮೀಟರ್ ಅಂತರ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಈ ಯೋಜನೆಯಡ್ಡಿಯಲ್ಲಿ ಸಸಿಗಳನ್ನು ಒಂದು ಕೆಡಯಿಂದ ಮತ್ತೊಂದು ಕಡೆಗೆ ನಾಟಿ ಮಾಡುವುದುನ್ನು ತಪ್ಪಿಸಲು ಶಾಲಾ ಆವರಣದಲ್ಲಿ ಕಟ್ಟಡ ಕಾಮಗಾರಿಗಾಗಿ ಗುರುತಿಸಲ್ಪಟ್ಟ ಸ್ಥಳದಲ್ಲಿ ಸಸಿಗಳನ್ನು ನೆಡದಿರುವಂತೆ ಕ್ರಮವಹಿಸುವುದು. ಸದರಿ ಅಂಶವನ್ನು ಗಮನಿಸಿ ಶಾಲಾವಾರು ಅವಶ್ಯವಿರುವ ಸಸಿಗಳ ಸಂಖ್ಯೆಯನ್ನು ನಿರ್ಧರಿಸಿ ಮತ್ತು ಶಾಲೆವಾರು ಸಸಿಗಳ ಅಗತ್ಯದ

ವಿವರವನ್ನು ಸಾಮಾಜಿಕ ಅರಣ್ಯ ವಿಭಾಗದ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸಬೇಕು.(ಅನುಬಂಧ-1 ರಲ್ಲಿನ ನಮೂನೆಗಳಂತೆ) ನಂತರ ವಲಯ ಅರಣ್ಯಾಧಿಕಾರಿಗಳು ತಾಲ್ಲೂಕಿನ ಯಾವುದೇ ನರ್ಸರಿಗಳಿಂದ, ಸಾಮಾಜಿಕ ಅರಣ್ಯ / ಪ್ರಾದೇಶಿಕ / ವನ್ಯಜೀವಿ ವಿಭಾಗದ ನರ್ಸರಿಗಳಿಂದ ಸಸಿಗಳನ್ನು ಹಂಚಿಕೆ ಮಾಡಬೇಕು. ಪ್ರಾದೇಶಿಕ ಮತ್ತು ವನ್ಯಜೀವಿ ಘಟಕಗಗಳಿಂದ ಸಸಿಗಳ ಲಭ್ಯತೆಯ ಮಾಹಿತಿಯನ್ನು ಕ್ರೂಡೀಕರಿಸುವುದು ಅರಣ್ಯ ಇಲಾಖೆಯ ನೋಡಲ್ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

6. ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಇವರುಗಳು ಎಲ್ಲಾ ಕ್ರೂಢೀಕೃತ ಮಾಹಿತಿಯನ್ನು ಜಿಲ್ಲಾ ಹಂತದ ಅರಣ್ಯಾಧಿಕಾರಿಗಳಿಗೆ ಸಲ್ಲಿಸಲು ಕ್ರಮವಹಿಸುವುದು.
7. ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅರಣ್ಯಾಧಿಕಾರಿಗಳು ನಿರ್ಧರಿಸುವ ನರ್ಸರಿಗಳಿಂದ ಸಸಿಗಳನ್ನು ಪಡೆದುಕೊಂಡು ಸ್ವೀಕೃತಿ ನೀಡಿ ಸಂಬಂಧಪಟ್ಟ ಶಾಲೆಗಳಿಗೆ ಸಾಗಾಣಿಕೆ ಮಾಡುವುದು. ಸದರಿ ಸಾಗಾಣಿಕೆಗೆ ತಗಲುವ ವೆಚ್ಚದ ಮೊತ್ತಕ್ಕೆ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲು ಶಾಲಾ ಶಿಕ್ಷಣ ಇಲಾಖೆಯಿಂದ ಕೋರಿಕೆ ಸಲ್ಲಿಸಿ ನಂತರ ಸಂಬಂಧಿಸಿದವರಿಗೆ ಬಿಡುಗಡೆ ಮಾಡಲಾಗುವುದು.
8. ಸದರಿ ಕಾರ್ಯಕ್ರಮದಲ್ಲಿ ಸರ್ಕಾರಿ ಕಿರಿಯ/ ಹಿರಿಯ ಪ್ರಾಥಮಿಕ / ಪ್ರೌಢ ಶಾಲೆ / ಪದವಿ ಪೂರ್ವ ಕಾಲೇಜುಗಳಲ್ಲಿನ 1 ರಿಂದ 12ನೇ ತರಗತಿಗಳ ಮಕ್ಕಳು ಭಾಗವಹಿಸಬೇಕಾಗಿದೆ. ಸದರಿ "ಸಸ್ಯ ಶ್ಯಾಮಲ" ಕಾರ್ಯಕ್ರಮದಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೇಮ, ಪರಿಸರ ಜಾಗೃತಿ ಮತ್ತು ಅರಣ್ಯ ಸಂರಕ್ಷಣೆಯ ಕುರಿತು ಕಾಳಜಿಯನ್ನು ಉಂಟುಮಾಡುತ್ತದೆ. ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಸ್ಥಳಾವಕಾಶದ ಲಭ್ಯತೆಯ ಮೇಲೆ ಸಸಿಗಳನ್ನು ನೆಡುವ ಕಾರ್ಯ ಕೈಗೊಳ್ಳಬೇಕಾಗಿದೆ.

ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ "ಸಸ್ಯ ಶ್ಯಾಮಲ" ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು (ಗುಂಡಿಗಳನ್ನು ತೋಡಲು) ಮುಖ್ಯ ಶಿಕ್ಷಕರು, ಪೋಷಕರ, ಎಸ್.ಡಿ.ಎಂ.ಸಿ ಸದಸ್ಯರ/ಸ್ಥಳೀಯ ಸಂಸ್ಥೆ ಜನಪ್ರತಿನಿಧಿಗಳ/ ಸ್ವಯಂ ಸೇವಾ ಸಂಸ್ಥೆಗಳ ಹಾಗೂ ಗ್ರಾಮ ಪಂಚಾಯತಿಯ ಗ್ರಾಮ ಅರಣ್ಯ ಸಮಿತಿಯವರ ಸಹಕಾರ ಪಡೆಯುವುದು. ಸದರಿ ಶಾಲೆಯ ಮಕ್ಕಳಿಗೆ ಕೇವಲ ಸಸಿಗಳನ್ನು ನೆಡುವ ಮತ್ತು ನೀರುಣಿಸುವ ಕಾರ್ಯವನ್ನು ಮಾತ್ರ ವಹಿಸುವುದು.

ಹಿರಿಯ ಪ್ರಾಥಮಿಕ /ಪ್ರೌಢ ಶಾಲೆ/ಪದವಿ ಪೂರ್ವ ಕಾಲೇಜುಗಳಲ್ಲಿ "ಸಸ್ಯ ಶ್ಯಾಮಲ" ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಗುಂಡಿಗಳನ್ನು ತೋಡಲು 6-12 ನೇ ತರಗತಿ ಮಕ್ಕಳಿಗೆ ಶ್ರಮದಾನದ ಮೂಲಕ ಕೈಗೊಳ್ಳಲು ವಹಿಸಬಹುದು. ಜೊತೆಗೆ ಮುಖ್ಯ ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು/ಸ್ಥಳೀಯ ಸಂಸ್ಥೆ ಜನಪತ್ರಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿಯ ಗ್ರಾಮ ಅರಣ್ಯ ಸಮಿತಿಯವರ ಸಹಕಾರ ಪಡೆಯುವುದು.

ಸದರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಒಂದೇ ದಿನ ಗುಂಡಿಗಳನ್ನು ತೋಡಲು ಸಾಧ್ಯವಾಗದೇ ಇದ್ದಲ್ಲಿ ಹಲವು ದಿನಗಳ ಕಾಲವ್ಯಾಪ್ತಿಯಲ್ಲಿ ಪ್ರತಿದಿನ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ನಿಗದಿತ ಅಳತೆಯ ಗುಂಡಿಗಳನ್ನು ತೋಡಲು ಮುಖ್ಯ ಶಿಕ್ಷಕರು/ಪ್ರಾಂಶುಪಾಲರು ಕ್ರಮವಹಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನದಲ್ಲಿ ಮಕ್ಕಳ ಸುರಕ್ಷತೆಯ ಕುರಿತು ಕಾಳಜಿವಹಿಸುವುದು.

ಯಾವುದೇ ಶಾಲೆಗೆ ಸ್ಥಳಾವಕಾಶದ ಲಭ್ಯತೆಯನ್ನು ಆಧರಿಸಿ ಗರಿಷ್ಠ 50 ಸಸಿಗಳನ್ನು ಮಾತ್ರ ಒದಗಿಸಲಾಗುವುದು. ಒಂದು ವೇಳೆ ಶಾಲೆಯಲ್ಲಿ ಹೆಚ್ಚಿನ ಸ್ಥಳಾವಕಾಶವಿದ್ದು, ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಕನಿಷ್ಟ ಒಂದು ಮಗುವಿಗೆ ಒಂದು ಸಸಿ ನೆಡಬಹುದು. ಒಂದು ವೇಳೆ ಶಾಲೆಯಲ್ಲಿ ಸ್ಥಳಾವಕಾಶ ಕಡಿಮೆ ಇದ್ದು, ಮಕ್ಕಳ ಸಂಖ್ಯೆ ಹೆಚ್ಚಿದ್ದಲ್ಲಿ ಒಂದು ಸಸಿ ನೆಡಲು 2-3 ಮಕ್ಕಳಿಗೆ ವಹಿಸಬಹುದು.

9. ಅರಣ್ಯ ಇಲಾಖೆಯವರ ಸಲಹೆಯಂತೆ ಸಸಿಗಳನ್ನು ನೆಡಲು ಹಾಗೂ ಪೋಷಿಸಲು ಈ ಕೆಳಗಿನಂತೆ ಕ್ರಮವಹಿಸುವುದು :-

I. ಸಂಬಂಧಪಟ್ಟ ಶಾಲೆಯ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು ಸಸಿಗಳನ್ನು ನೆಡಲು ಗುಂಡಿಗಳನ್ನು ಶ್ರಮದಾನದ ಮೂಲಕ ತೆಗೆಸಲು ಕ್ರಮ ಕೈಗೊಳ್ಳುವುದು. ಗುಂಡಿಯ ಗಾತ್ರವು ಈ ಕೆಳಕಂಡಂತಿರಬೇಕು.

| ಕ್ರ ಸಂ | ಸಸಿಗಳ ಅಳತೆ | ಗುಂಡಿಯನ್ನು ತೆಗೆಯಬೇಕಾದ ಕನಿಷ್ಟ ಅಳತೆ (ಸೆಂ.ಮೀ) |
|---|---|---|
| 1 | 14"x20" | 75x75x75 |
| 2 | 8"x12" | 60x60x60 |
| 3 | 5"x8" | 45x45x45 |

ಗುಂಡಿಯನ್ನು ವಿದ್ಯಾರ್ಥಿಗಳಿಂದ ತೆಗೆಸುವುದು ಸೂಕ್ತವಾಗಿರುತ್ತದೆ.

**ಗಮನ :-** "ಪ್ರತಿಯೊಂದು ಸಸಿಯನ್ನು ನೆಡುವ ಗುಂಡಿಯಿಂದ ಎಲ್ಲಾ ದಿಕ್ಕುಗಳಲ್ಲಿ ಕನಿಷ್ಠ 5 ಮೀಟರ್ ಸ್ಪಷ್ಟ ಅಡೆತಡೆ ಮುಕ್ತ ಸ್ಥಳವನ್ನು ಹೊಂದಿರಬೇಕು."

II. ಗುಂಡಿಯಿಂದ ತೆಗೆದ ಮೇಲ್ಭಾಗದ ಉತ್ತಮ ಮಣ್ಣನ್ನು ಗುಂಡಿಗೆ ಕನಿಷ್ಟ 1/3 ಭಾಗವನ್ನು ತುಂಬುವುದು, ತುಂಬಿದ ನಂತರ ಪಾಲಿತೀನ್ ಚೀಲವನ್ನು ಹರಿತವಾದ ಆಯುಧದಿಂದ ಬೇರ್ಪಡಿಸಿ ಸಸಿಯ ತಾಯಿ ಮಣ್ಣಿನೊಂದಿಗೆ ಗುಂಡಿಯ ಮಧ್ಯಭಾಗದಲ್ಲಿ ನೇರವಾಗಿ ಇರಿಸಿ ಬಾಕಿಯಿರುವ ಮಣ್ಣನ್ನು ಪೂರ್ಣವಾಗಿ ಮುಚ್ಚುವುದು.

III. ಸಸಿಗಳನ್ನು ನೆಟ್ಟ ನಂತರ 20 ಲೀಟರ್ ನೀರುಣಿಸುವುದು. ಮಳೆಯಾಗದಿದ್ದರೆ ಪ್ರತಿ ವಾರ ಸುಮಾರು 10 ಲೀಟರ್ ನೀರು ನೀಡಬಹುದು. ನೆಟ್ಟ ಸಸಿಗಳು ವಾಲುತ್ತಿದ್ದರೆ ಅದಕ್ಕೆ ಒಂದು ಆಧಾರಕಡ್ಡಿ (stakes) ಜೋಡಿಸಿ ಸಸಿ ಬೀಳದಂತೆ ಕಟ್ಟಬೇಕು. ಸಸಿಗಳನ್ನು ರಕ್ಷಿಸಲು ಸ್ಥಳೀಯ ದಾನಿಗಳು, ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳವರ ಸಹಾಯದಿಂದ Tree Guard ಗಳನ್ನು ಪಡೆಯಬಹುದಾಗಿದೆ. ಅಲ್ಲದೇ ಸಸಿಗಳನ್ನು ರಕ್ಷಿಸಲು ಸ್ಥಳೀಯವಾಗಿ ಲಭ್ಯವಿರುವ ಪರಿಹಾರಗಳನ್ನು ಬಳಸಬಹುದಾಗಿದೆ. ಈ ಸಂದರ್ಭದಲ್ಲಿ ಯಾವುದೇ ಆಹಿತಕರ ಘಟನೆ ನಡೆಯದ ಹಾಗೆ ಕಾಳಜಿವಹಿಸುವುದು ಅವಶ್ಯವಿದೆ.

IV. ಪ್ರತಿ ಸಸಿಯನ್ನು ಪ್ರಾಣಿಗಳಿಂದ ಅಥವಾ ಮಾನವರಿಂದ ಆಗುವ ಅನಗತ್ಯ ಹಾನಿಯಿಂದ ರಕ್ಷಿಸಬೇಕು.

V. ಶಾಲೆಯ/ಕಾಲೇಜಿನ ಆವರಣದಲ್ಲಿ ಸಸಿಗಳನ್ನು ನೆಡಲು ಮುಖ್ಯ ಶಿಕ್ಷಕರು/ಪ್ರಾಂಶುಪಾಲರು ಸೂಕ್ತ ಪ್ರದೇಶವನ್ನು / ಪರಿಸರವನ್ನು ಗುರುತಿಸಿ, ಸಸಿಗಳನ್ನು ನೆಟ್ಟು ಪ್ರಾಣಿ, ಪಕ್ಷಿ ಹಾಗೂ ಇನ್ನಿತರೆ ಮೂಲಗಳಿಂದ ಸಸಿಗಳನ್ನು ಸಂರಕ್ಷಿಸಲು ಸೂಕ್ತ ಮುಂಜಾಗ್ರತ ಕ್ರಮವನ್ನು ಕೈಗೊಂಡು ಪ್ರತಿ ವಿದ್ಯಾರ್ಥಿಯು / ವಿದ್ಯಾರ್ಥಿಗಳ ತಂಡ ಕನಿಷ್ಟ 2 ವರ್ಷ ಸತತವಾಗಿ ಸಸಿಯನ್ನು ಆರೈಕೆ ಮಾಡಲು ಒತ್ತು ನೀಡುವುದು.

VI. ವಿಶೇಷವಾಗಿ ಬೇಸಿಗೆ ಕಾಲದಲ್ಲಿ ಅಥವಾ ರಜಾ ದಿನಗಳಲ್ಲಿ ಸಸಿಗಳನ್ನು ಸಂರಕ್ಷಿಸುವ ಮತ್ತು ನೀರುಣಿಸುವ ಜವಾಬ್ದಾರಿಯು ಶಾಲೆಯ ಮುಖ್ಯಸ್ಥರದ್ದಾಗಿರುತ್ತದೆ. ಈ ವಿಚಾರವಾಗಿ ಪ್ರತಿಯೊಂದು ಸಸಿಯನ್ನು ಮಕ್ಕಳಿಗೆ ದತ್ತು ನೀಡಬಹುದಾಗಿರುತ್ತದೆ ಬೇಸಿಗೆ ರಜಾ ಸಂದರ್ಭದಲ್ಲಿ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸರದಿಯ ಮೇರೆಗೆ ಅಗತ್ಯಕ್ಕೆ ತಕ್ಕಂತೆ 7 ರಿಂದ 10 ದಿನಗಳಿಗೊಮ್ಮೆ ಸಸಿಗಳಿಗೆ ನೀರುಣಿಸುವ ಹಾಗೂ ಸಂರಕ್ಷಿಸುವ ಕಾರ್ಯವನ್ನು ಕೈಗೊಳ್ಳಬಹುದಾಗಿದೆ.

11. ಶಿಕ್ಷಣ ಇಲಾಖಾವತಿಯಿಂದ ರಾಜ್ಯಮಟ್ಟದಲ್ಲಿ ಈ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಈ ಕೆಳಕಂಡ ಅಧಿಕಾರಿಗಳು ನಿರ್ವಹಿಸುವುದು.

I. ಸರ್ಕಾರಿ ಪ್ರಾಥಮಿಕ ಶಾಲೆಗಳು - **ನಿರ್ದೇಶಕರು(ಪ್ರಾಥಮಿಕ)**
II. ಸರ್ಕಾರಿ ಪ್ರೌಢ ಶಾಲೆಗಳು - ನಿರ್ದೇಶಕರು (ಪ್ರೌಢ ಶಿಕ್ಷಣ)
III. ಪದವಿ ಪೂರ್ವಕಾಲೇಜುಗಳು- ನಿರ್ದೇಶಕರು (ಪದವಿ ಪೂರ್ವ ಶಿಕ್ಷಣ ಇಲಾಖೆ.
IV. ಕಲಬುರಗಿ ಮತ್ತು ಬೆಳಗಾವಿ ವಿಭಾಗದ ವ್ಯಾಪ್ತಿಯ ಸರ್ಕಾರಿ ಶಾಲೆಗಳ ಮತ್ತು ಪದವಿ ಪೂರ್ವ ಕಾಲೇಜುಗಳು - ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ.

12. ಜಿಲ್ಲಾ ಹಂತದಲ್ಲಿ ಸದರಿ ಕಾರ್ಯಕ್ರಮದ ಉತ್ತಮ ಸಂವಹನ ಸಾಧಿಸಲು ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ whatsapp ಗುಂಪನ್ನುರಚಿಸುವುದು.

(ಕ್ರಮ: ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು)

13. ಈ ಕಾರ್ಯಕ್ರಮದಲ್ಲಿ ಉತ್ತಮ ಪ್ರಗತಿ ಸಾಧಿಸಿದ ಪ್ರತಿ ಬ್ಲಾಕ್‌ನ ಕಿರಿಯ /ಹಿರಿಯ/ಪ್ರಾಥಮಿಕ/ಪ್ರೌಢ ಶಾಲೆ/ಪದವಿ ಪೂರ್ವ ಕಾಲೇಜಿಗೆ ಪ್ರಶಸ್ತಿಯನ್ನು ನೀಡಲಾಗುವುದು.

(ರಿತೇಶ್ ಕುಮಾರ ಸಿಂಗ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖೆ

(ಜಾವೇದ್ ಅಖ್ತರ್, ಭಾ.ಆ.ಸೇ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,

**ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ**

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಇವರುಗಳಿಗೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳಿಗೆ.
3. ರಾಜ್ಯದ ಎಲ್ಲಾ ಜಿಲ್ಲಾ ಅರಣ್ಯಧಿಕಾರಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರುಗಳಿಗೆ.
4. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇವರಿಗೆ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಇವರ ಮೂಲಕ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ತಾಲ್ಲೂಕು ಮಟ್ಟದ ವಲಯ ಅರಣ್ಯಧಿಕಾರಿಗಳಿಗೆ ಇವರಿಗೆ ಅಗತ್ಯ ಕ್ರಮಕ್ಕಾಗಿ.

**ಪತ್ರಿಯನ್ನು ಮಾಹಿತಿ ಹಾಗೂ ಕ್ರಮಕ್ಕಾಗಿ:-**

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅ.ಮು.ಪ) ಅರಣ್ಯ ಭವನ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ) ಅರಣ್ಯ ಭವನ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಅರಣ್ಯ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.
4. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
7. ನಿರ್ದೇಶಕರು (ಅಲ್ಪ ಸಂಖ್ಯಾತ) ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
8. ನಿರ್ದೇಶಕರು (ಪ್ರೌಢ ಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
9. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
11. ಜಂಟಿ ನಿರ್ದೇಶಕರು (ಪ್ರ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.
12. ಜಂಟಿ ನಿರ್ದೇಶಕರು (ದೈಹಿಕ ಶಿಕ್ಷಣ) ಆಯುಕ್ತರು ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
13. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. ಬೆಂಗಳೂರು.
14. ಕಚೇರಿ ಪ್ರತಿ.

# ಅನುಬಂಧ-1

ನಮೂನೆ-1

## ಸಸ್ಯ ಶ್ಯಾಮಲ ಕಾರ್ಯಕ್ರಮ ಅನುಷ್ಠಾನ ಕುರಿತು ಶಾಲಾವಾರು ಅವಶ್ಯವಿರುವ ಸಸಿಗಳ ಸಂಖ್ಯೆಯ ಮಾಹಿತಿ.

**ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು :**

| ಕ್ರ ಸಂ | ಜಿಲ್ಲೆಯ ಹೆಸರು | ಬ್ಲಾಕ್ ಹೆಸರು | ಶಾಲೆಯ ಹೆಸರು | 1 ರಿಂದ 5 ನೇ ತರಗತಿ ಮಕ್ಕಳ ಸಂಖ್ಯೆ | ಶಾಲೆಯಲ್ಲಿ ಇತರೆ ಬಳಕೆಗೆ ಅವಶ್ಯವಿರುವ ಸ್ಥಳವನ್ನು ಹೊರತು ಪಡಿಸಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ವಿದೆಯೇ? ಹೌದು/ಇಲ್ಲ | ಶಾಲೆಯಲ್ಲಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ಹಾಗೂ ಮಕ್ಕಳ ದಾಖಲಾತಿ ಆಧರಿಸಿ ಅವಶ್ಯವಿರುವ ಸಸಿಗಳ ಸಂಖ್ಯೆ (ಗರಿಷ್ಟ 50 ಸಸಿಗಳು) |
|---|---|---|---|---|---|---|
| 1 | | | | | | |
| 2 | | | | | | |

ಉಪನಿರ್ದೇಶಕರ ಸಹಿ ಮತ್ತು ಮೊಹರು

ನಮೂನೆ-2

## ಸಸ್ಯ ಶ್ಯಾಮಲ ಕಾರ್ಯಕ್ರಮ ಅನುಷ್ಠಾನ ಕುರಿತು ಶಾಲಾವಾರು ಅವಶ್ಯವಿರುವ ಸಸಿಗಳ ಸಂಖ್ಯೆಯ ಮಾಹಿತಿ.

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು :**

| ಕ್ರ ಸಂ | ಜಿಲ್ಲೆಯ ಹೆಸರು | ಬ್ಲಾಕ್ ಹೆಸರು | ಶಾಲೆಯ ಹೆಸರು | 1 ರಿಂದ 8 ನೇ ತರಗತಿ ಮಕ್ಕಳ ಸಂಖ್ಯೆ | ಶಾಲೆಯಲ್ಲಿ ಇತರೆ ಬಳಕೆಗೆ ಅವಶ್ಯವಿರುವ ಸ್ಥಳವನ್ನು ಹೊರತು ಪಡಿಸಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ವಿದೆಯೇ? ಹೌದು/ಇಲ್ಲ | ಶಾಲೆಯಲ್ಲಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ಹಾಗೂ ಮಕ್ಕಳ ದಾಖಲಾತಿ ಆಧರಿಸಿ ಅವಶ್ಯವಿರುವ ಸಸಿಗಳ ಸಂಖ್ಯೆ (ಗರಿಷ್ಟ 50 ಸಸಿಗಳು) |
|---|---|---|---|---|---|---|
| 1 | | | | | | |
| 2 | | | | | | |

ಉಪನಿರ್ದೇಶಕರ ಸಹಿ ಮತ್ತು
ಮೊಹರು

ನಮೂನೆ-3

## ಸಸ್ಯ ಶ್ಯಾಮಲ ಕಾರ್ಯಕ್ರಮ ಅನುಷ್ಠಾನ ಕುರಿತು ಶಾಲಾವಾರು ಅವಶ್ಯವಿರುವ ಸಸಿಗಳ ಸಂಖ್ಯೆಯ ಮಾಹಿತಿ.

**ಸರ್ಕಾರಿ ಪ್ರೌಢ ಶಾಲೆಗಳು:**

| ಕ್ರ ಸಂ | ಜಿಲ್ಲೆಯ ಹೆಸರು | ಬ್ಲಾಕ್ ಹೆಸರು | ಶಾಲೆಯ ಹೆಸರು | ಪ್ರೌಢ ಶಾಲೆಯಲ್ಲಿನ ಮಕ್ಕಳ ಸಂಖ್ಯೆ | ಶಾಲೆಯಲ್ಲಿ ಇತರೆ ಬಳಕೆಗೆ ಅವಶ್ಯವಿರುವ ಸ್ಥಳವನ್ನು ಹೊರತು ಪಡಿಸಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ವಿದೆಯೇ? ಹೌದು/ಇಲ್ಲ | ಶಾಲೆಯಲ್ಲಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ಹಾಗೂ ಮಕ್ಕಳ ದಾಖಲಾತಿ ಆಧರಿಸಿ ಅವಶ್ಯವಿರುವ ಸಸಿಗಳ ಸಂಖ್ಯೆ (ಗರಿಷ್ಟ 50 ಸಸಿಗಳು) |
|---|---|---|---|---|---|---|
| 1 | | | | | | |
| 2 | | | | | | |

ಉಪನಿರ್ದೇಶಕರ ಸಹಿ ಮತ್ತು ಮೊಹರು

ನಮೂನೆ-4

## ಸಸ್ಯ ಶ್ಯಾಮಲ ಕಾರ್ಯಕ್ರಮ ಅನುಷ್ಠಾನ ಕುರಿತು ಕಾಲೇಜುವಾರು ಅವಶ್ಯವಿರುವ ಸಸಿಗಳ ಸಂಖ್ಯೆಯ ಮಾಹಿತಿ.

**ಸರ್ಕಾರಿ ಪದವಿ ಪೂರ್ವ ಕಾಲೇಜುಗಳು:**

| ಕ್ರ ಸಂ | ಜಿಲ್ಲೆಯ ಹೆಸರು | ಬ್ಲಾಕ್ ಹೆಸರು | ಕಾಲೇಜಿನ ಹೆಸರು | ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ | ಕಾಲೇಜಿನ ಇತರೆ ಬಳಕೆಗೆ ಅವಶ್ಯವಿರುವ ಸ್ಥಳವನ್ನು ಹೊರತು ಪಡಿಸಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ವಿದೆಯೇ? ಹೌದು/ಇಲ್ಲ | ಕಾಲೇಜಿನಲ್ಲಿ ಸಸಿಗಳನ್ನು ನೆಡಲು ಲಭ್ಯವಿರುವ ಸ್ಥಳಾವಕಾಶ ಹಾಗೂ ಮಕ್ಕಳ ದಾಖಲಾತಿ ಆಧರಿಸಿ ಅವಶ್ಯವಿರುವ ಸಸಿಗಳ ಸಂಖ್ಯೆ (ಗರಿಷ್ಟ 50 ಸಸಿಗಳು) |
|---|---|---|---|---|---|---|
| 1 | | | | | | |
| 2 | | | | | | |

ಉಪನಿರ್ದೇಶಕರ ಸಹಿ ಮತ್ತು ಮೊಹರು